# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 147 |
| ಮಾನ್ಯ ಸದಸ್ಯರ ಹೆಸರು | ಶ್ರೀ ಹೆಚ್. ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 08/12/2025 |
| ಉತ್ತರಿಸಬೇಕಾದ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ವಿಕ್ಟೋರಿಯಾ, ಬೌರಿಂಗ್ ಮತ್ತು ಕೆ.ಸಿ. ಜನರಲ್ ಆಸ್ಪತ್ರೆಗಳಂತಹ ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗಿಗಳ ಒತ್ತಡದಿಂದ ದೀರ್ಘ ಕಾಯುವ ಸಮಯ ಮತ್ತು ಸರಿಯಾದ ಚಿಕಿತ್ಸೆಯ ಕೊರತೆ ಕಂಡುಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಕೈಗೊಂಡ ಕ್ರಮಗಳೇನು; | ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಹೊರರೋಗಿಗಳ ವಿಭಾಗದಲ್ಲಿ QR ಕೋಡ್ ಮುಖಾಂತರ ಚೀಟಿ ನೀಡಿ ಕಾಯುವಿಕೆ ಸಮಯವನ್ನು ಕಡಿಮೆ ಮಾಡಿ ತುರ್ತು ಚಿಕಿತ್ಸೆ ನೀಡುವ ವ್ಯವಸ್ಥೆ ಕಲ್ಪಿಸಲಾಗಿದೆ.<br><br>ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿಕ್ಟೋರಿಯಾ ಆಸ್ಪತ್ರೆಗೆ ರಾಜ್ಯದ ನಾನಾ ಭಾಗಗಳಿಂದಲ್ಲದೆ ನೆರೆ ರಾಜ್ಯಗಳಾದ ಆಂಧ್ರಪ್ರದೇಶ, ತಮಿಳುನಾಡು ರಾಜ್ಯಗಳಿಂದಲೂ ಸಹ ವಿವಿಧ ಖಾಯಿಲೆಗಳ ಚಿಕಿತ್ಸೆಗೆ ಬರುತ್ತಿರುತ್ತಾರೆ. ಸದರಿ ರೋಗಿಗಳಿಗೆ ಚಿಕಿತ್ಸೆಯಲ್ಲಿ ಯಾವುದೇ ವ್ಯತ್ಯಾಸವಾಗದಂತೆ ಕ್ರಮವಹಿಸಲಾಗುತ್ತಿದೆ. ಪ್ರಸ್ತುತ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ರೋಗಿಗಳ ಚಿಕಿತ್ಸೆಗೆ ದೀರ್ಘ ಸಮಯ ಕಾಯುವ ಸನ್ನಿವೇಶ ಉದ್ಭವಿಸಿರುವುದಿಲ್ಲ.<br><br>ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆ, ಹೆಚ್.ಎಸ್.ಐ.ಎಸ್. ಘೋಷಾ ಆಸ್ಪತ್ರೆ ಹಾಗೂ ಶಿವಾಜಿನಗರದ ಚರಕ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಸಮಯಕ್ಕೆ ಸರಿಯಾಗಿ ಚಿಕಿತ್ಸೆ ದೊರೆಯುತ್ತಿದ್ದು, ಚಿಕಿತ್ಸೆಯಲ್ಲಿ ಯಾವುದೇ ಕೊರತೆ ಕಂಡುಬಂದಿರುವುದಿಲ್ಲ. |
| ಆ) | ವೈದ್ಯರು, ನರ್ಸ್‌ಗಳು ಮತ್ತು ಪ್ಯಾರಾಮೆಡಿಕಲ್ ಸಿಬ್ಬಂದಿಯ ಕೊರತೆಯ ಕುರಿತು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಕೊರತೆಯ ಪ್ರಮಾಣವೆಷ್ಟು; | **ಬಂದಿದೆ**<br><br>ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಮಂಜೂರಾದ, ಕಾರ್ಯನಿರತ ಮತ್ತು ಖಾಲಿ ಇರುವ ವೈದ್ಯಕೀಯ, ಅರೆ ವೈದ್ಯಕೀಯ ಸಿಬ್ಬಂದಿಗಳ ವಿವರಗಳನ್ನು **ಅನುಬಂಧ** ದಲ್ಲಿ ನೀಡಲಾಗಿದೆ.<br><br>ಖಾಲಿ ಹುದ್ದೆಗಳ ಭರ್ತಿಗೆ ಗುತ್ತಿಗೆ/ಹೊರಗುತ್ತಿಗೆ ಮೇಲೆ ಭರ್ತಿ ಮಾಡುವ ಮೂಲಕ ಸಾರ್ವಜನಿಕರಿಗೆ ವೈದ್ಯಕೀಯ ಸೇವೆಯಲ್ಲಿ ತೊಂದರೆಯಾಗದಂತೆ ಕ್ರಮವಹಿಸಲಾಗುತ್ತಿದೆ.<br><br>ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿಕ್ಟೋರಿಯಾ ಆಸ್ಪತ್ರೆಗೆ ಮಂಜೂರಾದ ಹುದ್ದೆಗಳಲ್ಲಿ ಖಾಯಂ ಆಗಿ ಕಾರ್ಯನಿರ್ವಹಿಸುತ್ತಿದ್ದು, ಸರ್ಕಾರದ ಅನುಮೋದನೆಯಂತೆ ವೈದ್ಯರುಗಳನ್ನು ಮತ್ತು ಪ್ಯಾರಾ ಮೆಡಿಕಲ್ ಸಿಬ್ಬಂದಿಗಳನ್ನು ಅಗತ್ಯಕ್ಕೆ ತಕ್ಕಂತೆ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಂಡು ಸೇವೆಯನ್ನು ಪಡೆಯಲಾಗುತ್ತಿದೆ.<br><br>ಬೌರಿಂಗ್ ಆಸ್ಪತ್ರೆಯಲ್ಲಿ ವೈದ್ಯರು, ನರ್ಸ್‌ಗಳು ಮತ್ತು ಪ್ಯಾರಾ ಮೆಡಿಕಲ್ ಸಿಬ್ಬಂದಿಯ ಕೊರತೆ ಇರುವುದಿಲ್ಲ. ಖಾಲಿ ಇರುವ ಹುದ್ದೆಗಳನ್ನು ಸರ್ಕಾರದ ಆದೇಶದ ಪ್ರಕಾರ ಗುತ್ತಿಗೆ ಆಧಾರದ ಮೇಲೆ ಭರ್ತಿಯಾಗುತ್ತಿವೆ. |
| ಈ) | ಬೆಂಗಳೂರು ನಗರದಲ್ಲಿ NCD's (Non communicable Diseases) ತಪಾಸಣೆಯನ್ನು ಹೇಗೆ ವಿಸ್ತರಿಸಲಾಗುತ್ತಿದೆ; | ಬೆಂಗಳೂರು ನಗರ ಜಿಲ್ಲೆಯಲ್ಲಿ ಅಸಾಂಕ್ರಾಮಿಕ ರೋಗಗಳ ಕಾರ್ಯಕ್ರಮದಡಿಯಲ್ಲಿ ಒಟ್ಟು 09 ಆಸ್ಪತ್ರೆಗಳಲ್ಲಿ (05 ಸಮುದಾಯ ಆರೋಗ್ಯ ಕೇಂದ್ರ ಮತ್ತು 03 ತಾಲ್ಲೂಕು ಆಸ್ಪತ್ರೆಗಳು ಮತ್ತು 01 ಜಿಲ್ಲಾ ಆಸ್ಪತ್ರೆ) ಪ್ರತ್ಯೇಕವಾಗಿ ಎನ್.ಸಿ.ಡಿ., ಘಟಕವನ್ನು ಸ್ಥಾಪಿಸಲಾಗಿರುತ್ತದೆ. ಈ |

| | | |
|---|---|---|
| | (ವಿವರ ನೀಡುವುದು). | ಆಸ್ಪತ್ರೆಗಳಲ್ಲಿ 30 ವರ್ಷ ಮೇಲ್ಪಟ್ಟವರಿಗೆ ಮಧುಮೇಹ, ರಕ್ತದೊತ್ತಡ, ಬಾಯಿ ಕ್ಯಾನ್ಸರ್, ಸ್ತನ ಕ್ಯಾನ್ಸರ್ ಮತ್ತು ಗರ್ಭಕಂಠದ ಕ್ಯಾನ್ಸರ್‌ಗೆ ತಪಾಸಣೆಯನ್ನು ನಡೆಸಲಾಗುತ್ತಿದೆ.<br><br>ಬೆಂಗಳೂರು ನಗರದ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ನಮ್ಮ ಕ್ಲೀನಿಕ್‌ಗಳಲ್ಲಿ ಅಸಾಂಕ್ರಾಮಿಕ ರೋಗಗಳ ತಪಾಸಣೆಯನ್ನು ನಡೆಸಲಾಗುತ್ತಿದೆ.<br><br>ಬೆಂಗಳೂರು ನಗರದಲ್ಲಿ ಸಮುದಾಯ ಆರೋಗ್ಯ ಅಧಿಕಾರಿಗಳು, ಪ್ರಾಥಮಿಕ ಆರೋಗ್ಯ ಸುರಕ್ಷಣಾ ಅಧಿಕಾರಿ ಮತ್ತು ಆಶಾ ಕಾರ್ಯಕರ್ತೆಯರು, ಗೃಹ ಆರೋಗ್ಯ ಕಾರ್ಯಕ್ರಮದ ಅಡಿಯಲ್ಲಿ ಎಲ್ಲಾ ಆಯುಷ್ಮಾನ್ ಆರೋಗ್ಯ ಕೇಂದ್ರಗಳ ಮೂಲಕ 14 ಅಸಾಂಕ್ರಾಮಿಕ ರೋಗಗಳ ತಪಾಸಣೆಯನ್ನು ಹಾಗೂ ಚಿಕಿತ್ಸೆಯನ್ನು ನೀಡಲಾಗುತ್ತಿದ್ದು, ಸದರಿ ಯೋಜನೆಯನ್ನು ಗೃಹ ಆರೋಗ್ಯ ಯೋಜನೆ ಮೂಲಕ ವಿಸ್ತರಿಸಲಾಗಿರುತ್ತದೆ.<br><br>ಉಪ ಕೇಂದ್ರಗಳು/ಆಯುಷ್ಮಾನ್ ಆರೋಗ್ಯ ಕೇಂದ್ರಗಳಲ್ಲಿ ಪ್ರತಿ ಮಂಗಳವಾರ ಸಮುದಾಯ ಮಟ್ಟದಲ್ಲಿ ಆರೋಗ್ಯಾಧಿಕಾರಿಗಳು ಅಸಾಂಕ್ರಾಮಿಕ ರೋಗಗಳ ತಪಾಸಣೆ ನಡೆಸಲಾಗುತ್ತಿದೆ.<br><br>ಬೆಂಗಳೂರು ನಗರದಲ್ಲಿ ಗೃಹ ಆರೋಗ್ಯ ಯೋಜನೆಯನ್ನು ಜುಲೈ-2025 ರಿಂದ ಸಂಪೂರ್ಣವಾಗಿ ವಿಸ್ತರಿಸಲಾಗಿದ್ದು, ಅಕ್ಟೋಬರ್ 2025ರ ಮಾಹೆಯವರೆಗೂ 20,44,204 ಮನೆಗಳಿಗೆ ಆಶಾ ಕಾರ್ಯಕರ್ತೆಯರು ಭೇಟಿ ನೀಡಿ ಒಟ್ಟು 46,97,218 ಜನರನ್ನು ಹತ್ತಿರದ ಆಯುಷ್ಮಾನ್ ಕೇಂದ್ರಗಳಿಗೆ ಸಂಪರ್ಕಿಸಲು ತಿಳಿಸಲಾಗಿದೆ. ಸಮುದಾಯ ಆರೋಗ್ಯ ಅಧಿಕಾರಿಗಳು ಮತ್ತು ಪ್ರಾಥಮಿಕ ಆರೋಗ್ಯ ಸುರಕ್ಷಣಾ ಅಧಿಕಾರಿಗೂ ಆಯುಷ್ಮಾನ್ ಆರೋಗ್ಯ ಕೇಂದ್ರಗಳಲ್ಲಿ 14 ಅಸಾಂಕ್ರಾಮಿಕ ರೋಗಗಳ ತಪಾಸಣೆಯನ್ನು ನಡೆಸಿರುತ್ತಾರೆ. |
| ಉ) | ಔಷಧ ಸರಬರಾಜಿನಲ್ಲಿ ಗುಣಮಟ್ಟ ಖಾತ್ರಿಪಡಿಸಲು ಸರ್ಕಾರ ಹೇಗೆ ಕಾರ್ಯನಿರ್ವಹಿಸುತ್ತಿದೆ? (ವಿವರ ನೀಡುವುದು). | ಕೆ.ಸಿ. ಜನರಲ್ ಆಸ್ಪತ್ರೆಗೆ ಕೆ.ಎಸ್.ಎಂ.ಎಸ್.ಸಿ.ಎಲ್ ವತಿಯಿಂದ ಸರಬರಾಜಾದ ಔಷಧಿಗಳ ಗುಣಮಟ್ಟ ಲೋಪದೋಷದ ಬಗ್ಗೆ ವರದಿ ಬಂದಲ್ಲಿ ಅಂತಹ ಔಷಧಿಗಳನ್ನು ರೋಗಿಗಳಿಗೆ ನೀಡದೆ ತಡೆಹಿಡಿದು ಹಿಂದಿರುಗಿಸಲು ಕ್ರಮವಹಿಸಲಾಗುತ್ತದೆ.<br><br>ಕೆ.ಎಸ್.ಎಂ.ಎಸ್.ಸಿ.ಎಲ್. ಸಂಸ್ಥೆಯು KTPP ಕಾಯ್ದೆಯ ಅನುಸಾರ ಟೆಂಡರ್ ಮೂಲಕ ಅಗತ್ಯವಿರುವ ಔಷಧಗಳನ್ನು ಖರೀದಿಸಿ ಆರೋಗ್ಯ ಸಂಸ್ಥೆಗಳ ಬೇಡಿಕೆಯಂತೆ ಸಂಸ್ಥೆವಾರು ಪೂರೈಸಲಾಗುತ್ತದೆ. ಔಷಧಗಳನ್ನು ಸರಬರಾಜು ಮಾಡುವಾಗ In-house NABL Certificate ಹೊಂದಿರುವ ಲ್ಯಾಬ್‌ಗಳು ನೀಡಿರುವ ಔಷಧಗಳ ಗುಣಮಟ್ಟದ ವರದಿಗಳನ್ನು ಸಲ್ಲಿಸುತ್ತಾರೆ.<br><br>ಮುಂದುವರೆದು ಸರಬರಾಜಾಗಿರುವ ಎಲ್ಲಾ ಬ್ಯಾಚ್‌ನ ಔಷಧವು Aushada QC module ಮುಖಾಂತರವಾಗಿ 5 ಔಷಧ ಉಗ್ರಾಣಗಳಿಂದ KSMSCL ಗುಣಕೋಶ ವಿಭಾಗಕ್ಕೆ ಔಷಧ ಮಾದರಿಗಳನ್ನು ಗುಣಮಟ್ಟ ಪರೀಕ್ಷೆಗಾಗಿ ಸಲ್ಲಿಸುತ್ತಾರೆ. Aushada QC module ಮೂಲಕ 1 ಔಷಧ ಮಾದರಿಯನ್ನು ಆಯ್ಕೆಮಾಡಿ NABL Certificate empanelled ಲ್ಯಾಬ್‌ಗೆ ಗುಣಮಟ್ಟ ಪರೀಕ್ಷೆಗಾಗಿ ಕಳುಹಿಸಿಕೊಡಲಾಗುತ್ತದೆ. ಸದರಿ ಔಷದಗಳ ಲ್ಯಾಬ್ ವರದಿಗಳನ್ನು ಪರೀಕ್ಷಿಸಿ ಔಷಧಗಳನ್ನು ಬಳಕೆಗೆ ಅನುಮತಿ ನೀಡಲಾಗುತ್ತದೆ. ಕೇಂದ್ರ ಮತ್ತು ರಾಜ್ಯ ಸರ್ಕಾರದ ಔಷಧ ನಿಯಂತ್ರಣ ಇಲಾಖೆಯ ಔಷಧ ಪರಿವೀಕ್ಷಕರು Random ಆಗಿ ಔಷಧಗಳ ಮಾದರಿಗಳನ್ನು ಸಂಗ್ರಹಿಸಿ ಪರೀಕ್ಷೆಗೆ |

| | | |
|---|---|---|
| | | ಒಳಪಡಿಸುತ್ತಾರೆ. ಯಾವ ಬ್ಯಾಚ್‌ಗಳ ಔಷಧವು ಪರೀಕ್ಷೆಯಲ್ಲಿ ಉತ್ತಮಗುಣಮಟ್ಟವಲ್ಲವೆಂದು ಘೋಷಣೆ ಆಗುತ್ತದೋ ಅಂತಹ ಬ್ಯಾಚ್‌ನ ಔಷಧವನ್ನು ಬಳಕೆ ಮಾಡದಂತೆ Aushada ತಂತ್ರಾಂಶದಲ್ಲಿ ಫ್ರೀಜ್ ಮಾಡಿ ತಡೆಹಿಡಿಯಲಾಗುತ್ತದೆ.<br><br>ವಿಕ್ಟೋರಿಯಾ ಆಸ್ಪತ್ರೆಗೆ ಕಾಲಕಾಲಕ್ಕೆ ಸರಬರಾಜಾಗುವ ಔಷಧಿಗಳನ್ನು ಔಷಧಗಳ ಗುಣಮಟ್ಟ ವಿಶ್ಲೇಷಣಾ ವರದಿಯೊಂದಿಗೆ ಸ್ವೀಕರಿಸಿ ಆಸ್ಪತ್ರೆಯ ವಿವಿಧ ವಾರ್ಡ್‌ಗಳು ಮತ್ತು ಹೊರರೋಗಿಗಳ ಔಷಧಿ ವಿತರಣಾ ವಿಭಾಗಕ್ಕೆ ವಿತರಿಸಲಾಗುತ್ತಿದೆ. ಇದರೊಂದಿಗೆ ಕಾಲಕಾಲಕ್ಕೆ ಔಷಧ ನಿಯಂತ್ರಕರು, ಔಷಧ ನಿಯಂತ್ರಣಾ ಇಲಾಖೆಯು, ಔಷಧ ಉಗ್ರಾಣಕ್ಕೆ ಭೇಟಿ ನೀಡಿ ಸರಬರಾಜಾದ ಹಲವು ಬ್ಯಾಚ್ ಸಂಖ್ಯೆಯ ಔಷಧಿಗಳ ಮಾದರಿಗಳನ್ನು ಸಂಗ್ರಹಿಸಿ ಗುಣಮಟ್ಟ ವಿಶ್ಲೇಷಣೆಗೆ ಒಳಪಡಿಸಲಾಗುತ್ತಿರುತ್ತದೆ. ಈ ಸಂಸ್ಥೆಯ ಫಾರ್ಮಕಾಲಜಿ ವಿಭಾಗದ ವೈದ್ಯರು ಸಹ ಆಸ್ಪತ್ರೆಗೆ ಸರಬರಾಜು ಆಗುವ ಔಷಧಿ ಮತ್ತು ರಾಸಾಯನಿಕಗಳ ಗುಣಮಟ್ಟವನ್ನು ಪರೀಕ್ಷಿಸಿ ರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ.<br><br>ಬೌರಿಂಗ್ ಆಸ್ಪತ್ರೆಗೆ ಸರಬರಾಜು ಔಷಧಗಳ ಗುಣಮಟ್ಟಗಳನ್ನು ಖಾತ್ರಿಪಡಿಸಿಕೊಳ್ಳಲು ಔಷಧಗಳ ಸ್ಯಾಂಪಲ್‌ಗಳನ್ನು ಔಷಧ ನಿಯಂತ್ರಣ ಇಲಾಖೆಗೆ ಪರೀಕ್ಷೆಗೆ ಕಳುಹಿಸಿ, ಪರೀಕ್ಷಿಸಿದ ನಂತರ ರೋಗಿಗಳ ಚಿಕಿತ್ಸೆಗೆ ಬಳಸಲಾಗುತ್ತದೆ. |

**ಸಂಖ್ಯೆ: ಆಕುಕ 101 ಹೆಚ್‌ಎಸ್‌ಡಿ 2025**

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

# K.C.General Hospital, Malleshwaram, Bengaluru

## Regular Staff details

| Sl.No | Designation | Sanctioned | Working | Vacant | Remarks |
|---|---|---|---|---|---|
| 1 | ವೈದ್ಯಕೀಯ ಅಧೀಕ್ಷಕರು | 1 | 1 | 0 | |
| 2 | ಸ್ಥಾನೀಯ ವೈದ್ಯಾಧಿಕಾರಿಗಳು | 1 | 0 | 1 | |
| 3 | ಓ.ಪಿ.ಡಿ. ಸರ್ಜನ್ | 1 | 0 | 1 | |
| 4 | ಅಸ್ಥಿಚಿಕಿತ್ಸಾ ತಜ್ಞರು | 3 | 3 | 0 | |
| 5 | ಶಸ್ತ್ರಚಿಕಿತ್ಸಾ ತಜ್ಞರು | 6 | 5 | 1 | |
| 6 | ಸ್ತ್ರೀ ರೋಗ ಮತ್ತು ಪ್ರಸೂತಿ ತಜ್ಞರು | 5 | 5 | 0 | |
| 7 | ಫಿಸಿಷಿಯನ್ | 4 | 4 | 0 | |
| 8 | ಮಕ್ಕಳ ತಜ್ಞರು | 3 | 3 | 0 | |
| 9 | ಅರಿವಳಿಕೆ ತಜ್ಞರು | 3 | 2 | 1 | |
| 10 | ಇ.ಎನ್.ಟಿ. | 2 | 2 | 0 | |
| 11 | ನೇತ್ರ ತಜ್ಞರು | 3 | 2 | 1 | |
| 12 | ಪೆಥಾಲಜಿಸ್ಟ್ | 1 | 1 | 0 | |
| 13 | ರಕ್ತನಿಧಿ ಅಧಿಕಾರಿ (ಪೆಥಾಲಜಿಸ್ಟ್) | 1 | 1 | 0 | |
| 14 | ಮೈಕ್ರೋಬಯಾಲಜಿಸ್ಟ್ | 2 | 2 | 0 | |
| 15 | ಚರ್ಮ ರೋಗ ತಜ್ಞರು | 1 | 1 | 0 | |
| 16 | ಮಾನಸಿಕ ರೋಗ ತಜ್ಞರು | 1 | 1 | 0 | |
| 17 | ದಂತ ತಜ್ಞರು | 2 | 2 | 0 | |
| 18 | ರೇಡಿಯಾಲಜಿಸ್ಟ್ | 1 | 1 | 0 | |
| 19 | ಸಿ.ಎಂ.ಒ / ಎಸ್.ಎಂ.ಒ | 11 | 3 | 8 | |
| 20 | ಸಹಾಯಕ ಆಡಳಿತಾಧಿಕಾರಿಗಳು | 1 | 1 | 0 | |
| 21 | ಶುಶ್ರೂಷಕ ಅಧೀಕ್ಷಕರು ದರ್ಜೆ-1 | 1 | 0 | 1 | |
| 22 | ಮನೋಸಾಮಾಜಿಕ ತಜ್ಞರು | 1 | 1 | 0 | |
| 23 | ಕ್ಲಿನಿಕಲ್ ಸೈಕಾಲಜಿಸ್ಟ್ | 1 | 1 | 0 | |
| 24 | ಬಯೋಕೆಮಿಸ್ಟ್ | 1 | 0 | 1 | |
| 25 | ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ | 1 | 0 | 1 | |
| 26 | ಕಛೇರಿ ಅಧೀಕ್ಷಕರು | 1 | 1 | 0 | |
| 27 | ಪ್ರಥಮ ದರ್ಜೆ ಸಹಾಯಕರು | 6 | 2 | 4 | |
| 28 | ದ್ವಿತೀಯ ದರ್ಜೆ ಸಹಾಯಕರು | 7 | 5 | 2 | |
| 29 | ಬೆರಳಚ್ಚುಗಾರರು | 1 | 0 | 1 | |

| | | | | | |
|---|---|---|---|---|---|
| 30 | ಬೆರಳಚ್ಚುಗಾರರು ಹಾಗೂ ಸಹಾಯಕರು | 2 | 0 | 2 | |
| 31 | ಶುಶ್ರೂಷಕ ಅಧೀಕ್ಷಕರು ದರ್ಜೆ–2 | 5 | 1 | 4 | |
| 32 | ಹಿರಿಯ ಶುಶ್ರೂಷಕ ಅಧಿಕಾರಿಗಳು | 11 | 1 | 10 | |
| 33 | ಶುಶ್ರೂಷಕ ಅಧಿಕಾರಿಗಳು | 95 | 75 | 20 | |
| 34 | ಮಹಿಳಾ ಆರೋಗ್ಯ ಸಹಾಯಕಿ | 9 | 1 | 8 | |
| 35 | ಹಿರಿಯ ಪ್ರಯೋಗಶಾಲಾ ಟೆಕ್ನಾಲಜಿಸ್ಟ್ | 3 | 1 | 2 | |
| 36 | ಕಿರಿಯ ಪ್ರಯೋಗಶಾಲಾ ಟೆಕ್ನಾಲಜಿಸ್ಟ್ | 3 | 2 | 1 | |
| 37 | ಹಿರಿಯ ಫಾರ್ಮಾಸಿ ಅಧಿಕಾರಿ | 3 | 2 | 1 | |
| 38 | ಕಿರಿಯ ಫಾರ್ಮಾಸಿ ಅಧಿಕಾರಿ | 3 | 3 | 0 | |
| 39 | ಎಕ್ಸರೆಟೆಕ್ನಾಲಜಿಸ್ಟ್ | 3 | 3 | 0 | |
| 40 | ಮುಖ್ಯ ನೇತ್ರಾಧಿಕಾರಿ | 1 | 0 | 1 | |
| 41 | ನೇತ್ರಾಧಿಕಾರಿ | 2 | 2 | 0 | |
| 42 | ವೈದ್ಯಕೀಯ ದಾಖಲಾತಿ ಟೆಕ್ನಾಲಜಿಸ್ಟ್ | 1 | 0 | 1 | |
| 43 | ವೈದ್ಯಕೀಯ ಮೇಲ್ವಿಚಾರಕರು | 1 | 0 | 1 | |
| 44 | ಇ.ಸಿ.ಜಿ. ಟೆಕ್ನಾಲಜಿಸ್ಟ್ | 1 | 0 | 1 | |
| 45 | ವಿದ್ಯುತ್ ತಂತ್ರಜ್ಞರು | 1 | 1 | 0 | |
| 46 | ವಾಹನ ಚಾಲಕರು | 3 | 0 | 3 | |
| 47 | ಸಾಮಾಜಿಕ ಕಾರ್ಯಕರ್ತರು | 6 | 1 | 5 | |
| 48 | ಫಿಜಿಯೋಥೆರಪಿಸ್ಟ್ | 1 | 1 | 0 | |
| 49 | ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ | 1 | 0 | 1 | |
| 50 | ಗ್ರೂಪ್ "ಡಿ" | 132 | 21 | 111 | |
| **Total** | | **360** | **165** | **195** | |

**Medical Superintendent**

**K C General Hospital, Bengaluru**

| K.C.General Hospital, Malleshwaram, Bengaluru | | | |
|---|---|---|---|
| Staff Working under ARS | | | |
| SL.No | Designation | Working | Remarks |
| 1 | PRO | 1 | |
| 2 | Bio Chemist | 1 | |
| 3 | Bio Medical Engineer | 1 | |
| 4 | Physiotherapist | 1 | |
| 5 | Dietician | 1 | |
| 6 | Computer Operator | 7 | 1 DEO Working in Commissioner Office, HFWS, Arogya soudha Bengaluru |
| 7 | Medical Record Tech | 2 | |
| 8 | Ophthalmic Assistant | 1 | |
| 9 | X-Ray Technician | 1 | |
| 10 | Cook | 2 | |
| Total | | 18 | |

Medical Superintendent
K C General Hospital, Bengaluru

| K.C.General Hospital, Malleshwaram, Bengaluru | | | |
|---|---|---|---|
| Staff Working under Ab-Ark programme | | | |
| SL.No | Designation | Working | Remarks |
| 1 | Claims Executive | 3 | - |
| 2 | Computer Operator | 4 | - |
| Total | | 7 | |

Medical Superintendent
K C General Hospital, Bengaluru

| K.C.General Hospital, Malleshwaram, Bengaluru | | | |
|---|---|---|---|
| Staff Working under Outsource (Staff Nurse, Group D, Non clinical & others) | | | |
| SL.No | Designation | Working | Remarks |
| 1 | Group-D | 45 | Tender (State Budget) |
| 2 | Nonclinical | 30 | Tender (State Budget) |
| 3 | Security | 22 | Tender (ARS Fund) |
| 4 | DEO | 16 | Tender (ARS Fund) |
| Total | | 113 | |

Medical Superintendent
K C General Hospital, Bengaluru

| K.C.General Hospital, Malleshwaram, Bengaluru | | | |
|---|---|---|---|
| Staff Working under any other National programme/programme wise | | | |
| SL.No | Designation | Working | Remarks |
| 1 | STAFF NURSE | 5 | D Addiction NUHM/BBMP Staff |
| 2 | T.B.H.V | 1 | BBMP Staff |
| 3 | TECHNICAL SUPERVISORS | 1 | BBMP Staff |
| Total | | 7 | |

Medical Superintendent
K C General Hospital, Bengaluru

## K.C.General Hospital, Malleshwaram, Bengaluru

### Staff Working under NHM

| Sl.No | Designation | Sanctioned | Working | Vacant | Remarks |
|---|---|---|---|---|---|
| 1 | SNCU PEDIATRICIAN | 1 | 1 | 0 | |
| 2 | SNCU MEDICAL OFFICERS | 3 | 3 | 0 | |
| 3 | SNCU STAFF NURSE | 12 | 12 | 0 | |
| 4 | KMC STAFF NURSE | 4 | 4 | 0 | |
| 5 | LACTTATION STAFF NURSE | 1 | 1 | 0 | |
| 6 | CHILD COUNSELLOR | 1 | 1 | 0 | |
| 7 | RMNCH-A COUNSELLOR Family Planing | 1 | 1 | 0 | |
| 8 | SNCU DATA ENTRY OPERTAOR | 1 | 1 | 0 | |
| 9 | SNCU GROUP-D | 3 | 3 | 0 | |
| 10 | ANASTHETIST | 2 | 3 | -1 | |
| 11 | PEDIATRICIAN | 1 | 1 | 0 | |
| 12 | OTHER SPECIALIST | 4 | 2 | 2 | 1. OBG Gynecologist<br>2. radiologist |
| 13 | ICU MEDICAL OFFICERS | 3 | 3 | 0 | |
| 14 | ICU STAFF NURSE | 6 | 5 | 1 | |
| 15 | TECHNICAL SUPERVISORS | 1 | 1 | 0 | |
| 16 | AUDIOLOGIST & AUDIO METRIC ASSISTANT | 2 | 2 | 0 | |
| 17 | BIO MEDICAL ENGINEER | 1 | 1 | 0 | |
| 18 | CIVIL ENGINEER | 1 | 1 | 0 | |
| 19 | TELEMEDICINE MEDICAL OFFICER | 1 | 1 | 0 | |
| 20 | ASSISTANT ACCOUNT | 1 | 1 | 0 | |
| 21 | Nursing officer | 1 | 1 | 0 | BRINE HEALTH programme |
| 22 | District Coordinator | 1 | 1 | 0 | BRINE HEALTH programme |
| 23 | Psychologist | 1 | 1 | 0 | BRINE HEALTH programme |
| 24 | Physiotherpist | 1 | 1 | 0 | BRINE HEALTH programme |
| | **TOTAL** | **54** | **52** | **2** | |

### DNB

| SL.No | Designation | Working | Remarks |
|---|---|---|---|
| 1 | Senior Consultant, Dept of OBG | 1 | Under NHM Programme |
| 2 | Senior Consultant, Dept of Pediatrics | 1 | Under NHM Programme |
| 3 | Senior Consultant, Dept of Orthopedics | 1 | Under NHM Programme |
| 4 | Senior Consultant, Dept of Ophthalmology | 1 | Under NHM Programme |
| 5 | Senior Consultant, Dept of General Medicine | 1 | Under NHM Programme |
| 6 | Programme Assistant | 1 | Under NHM Programme |
| 7 | Librarian | 1 | Remuneration |
| 8 | Group D | 2 | Outsource |

| | | | | |
|---|---|---|---|---|
| | DNB Courses offered | DNB in Anaesthesia | | |
| | | DNB in General Medicine | | |
| | | DNB in General Surgery | | |
| | | DNB in OBG | | |
| | | DNB in Pediatrics | | |
| | | DNB in Orthopedics | | |
| | | DNB Diploma in Anaesthesia | | |
| | | DNB Diploma in Pedaitrics | | |
| | | DNB Diploma in OBG | | |
| | | DNB Diploma in Ophthalmology | | |
| | | DNB Diploma in Family Medicine | | |
| | | DNB Diploma in Radiology | | |
| | | DNB Diploma in ENT | | |
| | | | | |
| | DNB Teachers employed | Senior Consultant, Dept of OBG | | |
| | | Senior Consultant, Dept of | | |
| | | Senior Consultant, Dept of | | |
| | | Senior Consultant, Dept of | | |
| | | Senior Consultant, Dept of | | |

Medical Superintendent
K C General Hospital, Bengaluru